ಒಂಟೆ ಮರಿ ಸೋನ

ತಾರಾ ತಿವಾರಿ

ಚಿತ್ರಗಳು

ಮಿಕೀ ಪಟೇಲ್

ಅನುವಾದ

ಟಿ.ಎಸ್. ಸಂಜೀವ ರಾವ್





ನೆಹರೂ ಬಾಲ ಪುಸ್ತಕಾಲಯ

ಒಂಟೆ ಮರಿ ಸೋನ

ತಾರಾ ತಿವಾರಿ
ಚಿತ್ರಗಳು
ಮಿಕೀ ಪಟೇಲ್
ಅನುವಾದ
ಟಿ.ಎಸ್. ಸಂಜೀವ ರಾವ್

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ISBN 978-93-5491-167-5

ಮೊದಲ ಮುದ್ರಣ : 1974
ಐದನೆಯ ಮರುಮುದ್ರಣ : 2021 (ಶಕ 1943)

Sona's Adventures (*English*)
Onte Mari Sona (*Kannada*)

₹ 55.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in



ಒಂಟೆಮ್ಮ, ಅವಳ ಪುಟ್ಟ ಮಗ ಸೋನ, ಮರಳುಗಾಡಿನಲ್ಲಿ ಮೆಲ್ಲಗೆ ಹೆಜ್ಜೆ ಹಾಕುತ್ತ ಹೋಗುತ್ತಿದ್ದರು. ಸುಡುಸುಡು ಬಿಸಿಲು. ಮರಳು ಕಾದು ಕೆಂಡವಾಗಿತ್ತು. ಅದರ ಕಣಗಳು ಸೂರ್ಯನ ಪ್ರಕಾಶದಲ್ಲಿ ಚಿನ್ನದಂತೆ ಹೊಳೆಯುತ್ತಿದ್ದುವು. ಮರಳಿನಲ್ಲಿ ಕಾಲೂರಿ ಸೋನ ಝುಗ್ಗನೆ ನಿಂತುಬಿಟ್ಟ.

"ಇನ್ನೊಂದು ಹೆಜ್ಜೆ ಸಹಿತ ಮುಂದಿಡಲಾರೆ. ತುಂಬಾ ಬಾಯಾರಿಕೆ. ನೀರು ಬೇಕು," ಎಂದು ಗೋಗರೆದ.

ಒಂಟೆಮ್ಮ ಕತ್ತು ತಗ್ಗಿಸಿ ಮಗನ ಕಡೆ ನೋಡಿದಳು. "ಹೌದು ಮಗು, ನಿನಗೆ ತುಂಬ ಬಾಯಾರಿದೆ ಎಂದು ನನಗೆ ತಿಳಿಯದೆ?

ಇನ್ನೂ ಸ್ವಲ್ಪ ಹೊತ್ತು ಅಷ್ಟೆ. ಅದೋ ನೋಡು, ಇಲ್ಲೇ ಹತ್ತಿರ ನೀರು ಇರುವ ಹಾಗೆ ಕಾಣಿಸುತ್ತದೆ," ಎಂದು ಅವನಿಗೆ ಸಮಾಧಾನ ಹೇಳಿದಳು.

ತನ್ನ ಉದ್ದನೆಯ ಕತ್ತನ್ನು ದೂರದ ಮರಗಳ ಕಡೆ ಚಾಚಿ ತೋರಿಸಿದಳು.

"ಅಲ್ಲಿ ಕಾಣುತ್ತಿವೆಯಲ್ಲ, ಮರಗಳು? ಅಲ್ಲೇ ಮರಳುಗಾಡಿನಲ್ಲಿ ಮರ ಇದ್ದ ಕಡೆ ನೀರು ಇದ್ದೇ ಇರುತ್ತದೆ. ಅಲ್ಲೊಂದು ಹಳ್ಳಿ ಇದ್ದರೂ ಇರಬಹುದು. ಅಂತೂ ಅಲ್ಲಿ ಕೆಲವೊಂದು ಪ್ರಾಣಿಗಳಾದರೂ ಇರುತ್ತವೆ. ನಿನಗೆ ಆಡಲು ಜೊತೆ ಸಿಗುತ್ತದೆ. ಬಾ ಹೋಗೋಣ."







"ಆಹ! ಎಷ್ಟು ಚೆನ್ನ!" ಎಂದು ಉತ್ತರಿಸಿ ಸೋನ ಬೇಗ ಬೇಗ ಹೆಜ್ಜೆ ಹಾಕಿದ. ಸ್ವಲ್ಪ ಸಮಯದಲ್ಲೇ ಮರಗಳ ಗುಂಪು ಸಿಕ್ಕಿತು. ಒಂಟೆಮ್ಮ ತಲೆ ಮೇಲಕ್ಕೆತ್ತಿ ಗಾಳಿಯನ್ನು ಮೂಸಿ ನೋಡಿದಳು.

ಎಡಕ್ಕೆ ತಿರುಗಿ, "ಈ ಕಡೆ ಹೋಗೋಣಂತೆ. ಹತ್ತಿರವೇ ನೀರಿರುವ ವಾಸನೆ ಬಂತು," ಎಂದು ಮಗನಿಗೆ ಹೇಳಿದಳು.

ಸುತ್ತಲೂ ಎತ್ತರವಾದ ಮರಗಳು. ನಿಬಿಡವಾದ ಪೊದೆಗಳು. ಮಧ್ಯೆ ತಿಳಿಯಾದ, ತಂಪಾದ ನೀರು ತುಂಬಿದ ಕೊಳ. ಇಬ್ಬರೂ ಕತ್ತು ಬಗ್ಗಿಸಿ ಹೊಟ್ಟೆ ತುಂಬ ನೀರು ಹೀರಿದರು. ಮರದ ಮೇಲೆ ಕುಳಿತಿದ್ದ ಒಂದು ಕಾಗೆ ಅವರನ್ನೇ ನೋಡುತ್ತಿತ್ತು.

"ಅರರೆ! ನೀವಿಬ್ಬರೂ ಎಷ್ಟೊಂದು ನೀರು ಕುಡಿದು ಬಿಟ್ಟಿರಿ! ನಿಶ್ಚಯವಾಗೂ ಒಮ್ಮೆಗೇ ಇಷ್ಟು ನೀರು ಕುಡಿದ ಪ್ರಾಣಿಯನ್ನು ನಾನು ಕಂಡಿಲ್ಲ," ಎಂದು ಕಾಗೆ ಒದರಿತು. ತಲೆಯಲ್ಲಾಡಿಸುತ್ತ, "ಹೀಗೆ ನೀರು ಹೀರಿದರೆ ಆಯ್ತು! ಕೊಳವೆಲ್ಲ ಖಾಲಿ!" ಎಂದು ಗೊಣಗುಟ್ಟಿತು.



ನಗುತ್ತ, ಒಂಟೆಮ್ಮ "ಇಲ್ಲ! ಇಲ್ಲ! ಎಂದಿಗೂ ಇಲ್ಲ! ಆದರೆ ನೀನು ಹೇಳಿದ ಒಂದು ಮಾತು ನಿಜ. ನಾವು ಒಮ್ಮೆ ಕುಡಿದರೆ ಕೊಳಗ ಗಟ್ಟಲೆ ನೀರು ಹೀರುತ್ತೇವೆ" ಎಂದು ಹೇಳಿದಳು.

"ಅದೇಕೆ ಹಾಗೆ?" ಎಂದು ಕಾಗೆ ಕೇಳಿತು.

"ತಿಳಿಯದೆ? ನಾವು ಮರಳುಗಾಡಿನಲ್ಲಿ ಸದಾ ಅಲೆದಾಡುತ್ತಿರುವವರು. ಅಲ್ಲಿ ನೀರು ಸಿಗುವುದೇ ಕಷ್ಟ. ಆದರೂ ಅದರಿಂದ ನಮಗೇನೂ ತೊಂದರೆ ಇಲ್ಲ. ನೀರಿಲ್ಲದೆ ಅನೇಕ ದಿನ ಇರಲು ನಮಗೆ ಸಾಧ್ಯ. ನಮ್ಮ ಹೊಟ್ಟೆಯಲ್ಲಿ ನೀರು ಶೇಖರಿಸಿಡಲು ಒಂದು ದೊಡ್ಡ ಹಂಡೆಯಷ್ಟು ಜಾಗ ಇದೆ. ಆ ನೀರೆಲ್ಲ ಖರ್ಚಾದರೂ ನಮ್ಮ ದೇಹದಿಂದಲೇ ನಾವು ನೀರು ತಯಾರು ಮಾಡಿಕೊಳ್ಳುವ ಶಕ್ತಿ ನಮಗಿದೆ. ನಾವು ಇದಕ್ಕೆ ಮುಂಚೆ ನೀರು ಕುಡಿದದ್ದು ಯಾವಾಗ ಎಂದು ನಿನಗೆ ತಿಳಿದಿದೆಯೆ?"

ಈ ವಿಚಿತ್ರ ಪ್ರಾಣಿಗಳ ವಿಷಯದಲ್ಲಿ ಆಸಕ್ತಿ ಹುಟ್ಟಿ, ಕಾಗೆ ಕೇಳಿತು, "ನನಗೆ ತಿಳಿಯದು. ಯಾವಾಗ?"

"ಐದು ದಿನಗಳ ಹಿಂದೆ," ಎಂದು ಒಂಟೆಮ್ಮ ಹೇಳಿದಳು.

ಕಾಗೆಗೆ ಎಲ್ಲಿಲ್ಲದ ಆಶ್ಚರ್ಯ. "ಐದು ದಿನಗಳಾದುವೆ? ಎಂದು ಹೇಳುತ್ತ ಈ ಕುತೂಹಲಕಾರಿ ಸಂಗತಿಯನ್ನು ಮಿಕ್ಕ ಪ್ರಾಣಿಗಳಿಗೆ ತಿಳಿಸಲು ಅಲ್ಲಿಂದ ಹಾರಿ ಹೋಯಿತು.







ಈ ಮಾತುಗಳನ್ನು ಕೇಳಿ ಸೋನನಿಗೆ ಹೆಮ್ಮೆಯಿಂದ ಎದೆ ಉಬ್ಬಿತು.

"ನಾವೊಂದು ತರಹ ವಿಶೇಷ ಪ್ರಾಣಿಗಳಲ್ಲವೆ, ಅಮ್ಮ?" ಎಂದು ಅವನು ಕೇಳಿದ.



"ಹೌದು ಮಗು" ಎಂದು ಆಕೆ ಉತ್ತರ ಕೊಟ್ಟಳು.

ತಾಯಿ, ಮಗ ಇಬ್ಬರೂ ಮರಗಳ ನೆರಳಿನಲ್ಲಿ ಪವಡಿಸಿದರು. ಒಂಟೆಮ್ಮನಿಗೆ ತೂಕಡಿಕೆ.

"ನೀನೂ ನಿದ್ದೆ ಮಾಡು, ಸೋನ," ಎಂದು ಅವಳು ಮಗನಿಗೆ ಹೇಳಿದಳು.

"ಇಲ್ಲ, ನಾನು ಹಾಗೇ ಒಂದಿಷ್ಟು ಅಡ್ಡಾಡಿ ಬರುತ್ತೇನೆ," ಎಂದು ಸೋನ ಎದ್ದು ಹೊರಟ.

ಕಾಗೆ ಆಗಲೇ ಒಂಟೆಗಳು ಬಂದಿದ್ದ ಸುದ್ದಿಯನ್ನು ಎಲ್ಲ ಕಡೆ ಡಂಗುರ ಹೊಡೆದಿತ್ತು. ಹಿರಿಯಪ್ರಾಣಿಗಳಿಗೆ ಇದೇನು ಅಷ್ಟು ಆಶ್ಚರ್ಯಕರವಾಗಿರಲಿಲ್ಲ. ಆದರೆ ಕಿರಿಯ ಪ್ರಾಣಿಗಳಿಗೆ ಕುತೂಹಲ. ಅವು ಹೇಗಿರುತ್ತವೆ ನೋಡಬೇಕೆಂದು ಎಲ್ಲವೂ ಕೊಳದ ಬಳಿ ಹೊರಟವು. ಪೊದೆ, ಬಂಡೆಗಳ ಮರೆಯಲ್ಲಿ ಅವಿತುಕೊಂಡು ಆ ಕಡೆ ಈ ಕಡೆ ನೋಡಲು ಪ್ರಾರಂಭಿಸಿದುವು.





ಸೋನ ಅಲೆದಾಡುತ್ತಿರುವುದು ಅವುಗಳ ಕಣ್ಣಿಗೆ ಬಿತ್ತು. ಹರಟೆ ಮಲ್ಲ ಮೊಲ ಪೊದೆಯಿಂದ ಹೊರಗೆ ನೆಗೆದು ಬಂದ. ತನ್ನ ಹಿಂದಿನ ಕಾಲುಗಳ ಮೇಲೆ ಕುಳಿತು ಸೋನನನ್ನೇ ದೃಷ್ಟಿಸಿ ನೋಡತೊಡಗಿದ. ಅವನಿಗೆ ಹಿಡಿಸಲಾರದಷ್ಟು ನಗು ಬಂತು. ನಕ್ಕು ಬಿಟ್ಟ.

ಸೋನನಿಗೆ ಕೋಪ ಬಂತು. "ಏ, ನೀನ್ಯಾರು? ಅದೇಕೆ ಹಾಗೆ ಹಲ್ಲು ಕಿರಿಯುತ್ತೀ?" ಎಂದು ಕೇಳಿದ.

"ನೀನೋ, ನಿನ್ನ ಅವತಾರವೋ!" ಎನ್ನುತ್ತ ಮೊಲ ನಗುತ್ತಲೇ ಇತ್ತು. "ನಿನ್ನ ನೋಡಿದರೇ ನಗು ಬರುತ್ತೆ. ಏನೋ ಅದ್ಭುತ ಪ್ರಾಣಿಗಳು ಎಂದು ಕಾಗೆ ಹೇಳಿತು. ಅದ್ಭುತವೂ ಇಲ್ಲ, ಗಿದ್ಭುತವೂ ಇಲ್ಲ. ಬರೀ ಅವಲಕ್ಷಣದ ಪ್ರಾಣಿಗಳು, ಅಷ್ಟೆ! ಮುಖದಿಂದ ಪೆದ್ದು ಕಳೆ ಹೇಗೆ ಸುರಿಯುತ್ತಿದೆ ನೋಡು! ಆಹ! ಆ ನಿನ್ನ ಉದ್ದವಾದ ಕಾಲುಗಳೋ, ಆ ಡೊಗ್ಗು ಬೆನ್ನೋ, ಆ ಕತ್ತೋ — ಚೆನ್ನಾಗಿದೆ, ಚೆನ್ನಾಗಿದೆ, ಹ್ಹ ಹ್ಹ ಹ್ಹ!" ಎಂದು ಮೊಲ ಗಹಗಹಿಸಿ ನಕ್ಕಿತು.









ಆಗ ಮೇಕೆ, ಹಂದಿ, ಜಿಂಕೆ, ನರಿ ಎಲ್ಲರೂ ನಗಲು ಆರಂಭಿಸಿದವು. ಅವರೆಲ್ಲ ಸೋನನನ್ನು ಸುತ್ತುಗಟ್ಟಿ ಗೇಲಿ ಎಬ್ಬಿಸಿದುವು.

"ನಿನ್ನ ಹೆಸರೇನಯ್ಯ?" ಎಂದು ಹಂದಿ ಕೇಳಿತು. "ನಿನ್ನ ಬೆನ್ನ ಮೇಲೆ ಅದೇನೋ ಡುಬ್ಬ ಇದೆಯಲ್ಲ, ಅದೇನು? ಓಹೋ; ಇವನನ್ನು ಡುಬ್ಬಣ್ಣ ಎಂದೇ ಕರೆಯೋಣ. ಹ್ಹ ಹ್ಹ ಹ್ಹ!" ಎಂದು ಹಂದಿ ನಗೆಯಾಡಿತು.

"ಬೇಡ, ಬೇಡ, ಅವನನ್ನು ಚಪ್ಪಟೆಪಾದ ಎಂದು ಕರೆಯೋಣ. ಗಳದಂಥ ಅವನ ಕಾಲುಗಳನ್ನು ನೋಡಿ! ಆ ವಿಚಿತ್ರ ಚಪ್ಪಟೆಪಾದಗಳನ್ನು ನೋಡಿ!" ಎಂದು ಮೇಕೆ ಹಾಸ್ಯ ಮಾಡಿತು. ಚಂಗ್ ಚಂಗ್ ಎಂದು ನೆಗೆಯುತ್ತ ತನ್ನ ಚೆಂದದ ಕಾಲುಗಳನ್ನು ಪ್ರದರ್ಶಿಸಿತು.

"ಆಹ! ಅವನ ಕತ್ತೋ! ಉದ್ದವಾಗಿ ಸೌತೇ ಕಾಯಿ ಹಾಗೆ ಇದೆಯಲ್ಲ!"

"ಅವನ ಬಾಲನೋಡಿದಿರೇನು?" ಎನ್ನುತ್ತ ನರಿ ಸೋನನ ಮೊಂಡು ಬಾಲದ ಕಡೆ ತೋರಿಸಿತು.

"ನನ್ನ ಈ ಸುಂದರ ಬಾಲನೋಡಿರಿ," ಎಂದು ಜಂಭದಿಂದ ತನ್ನ ಹೊರವಾಗಿ ಬೆಳೆದ ಉದ್ದನೆಯ ಬಾಲವನ್ನು ಮೇಲೆ ಕೆಳಗೆ ಆಡಿಸಿತು.

"ಸುಮ್ಮನಿರಿ, ಅವನನ್ನು ಹಾಸ್ಯ ಮಾಡಬೇಡಿ. ನನ್ನ ಬಾಲವೂ ಹಾಗೆಯೇ ಮೊಂಡಾಗಿದೆಯಲ್ಲ," ಎಂದು ಮೃದು ಹೃದಯದ ಜಿಂಕೆ ನುಡಿಯಿತು.

ಸೋನನಿಗೆ ಏನು ಅನ್ನಬೇಕೋ ತಿಳಿಯಲಿಲ್ಲ. ಒಂದು ಕಡೆ ಕೋಪ, ಇನ್ನೊಂದು ಕಡೆ ದುಃಖ. ಏನೂ ತೋಚದೆ, ತಾಯಿಯ ಬಳಿ ಓಡಿ ಹೋದ. ಹಿಂದೆ, ಮಿಕ್ಕ ಪ್ರಾಣಿಗಳು ಕೇಕೆ ಹಾಕಿಕೊಂಡು ನಗುತ್ತಿರುವುದು ಕೇಳಿಸಿತು. ಜಿಂಕೆಯೊಂದೇ ಅವನನ್ನು ಹಾಸ್ಯ ಮಾಡಲಿಲ್ಲ.

ತಾಯಿಯನ್ನು ಕಂಡ ಕೂಡಲೇ ಸೋನನಿಗೆ ಕಣ್ಣಲ್ಲಿ ನೀರು ತುಂಬಿ ಬಂತು.

"ಏನಾಯಿತು ಮಗು?" ಎಂದು ಒಂಟೆಮ್ಮ ಕೇಳಿದಳು.

ಅವನ ಕಣ್ಣಿಂದ ಇನ್ನಷ್ಟು ನೀರು ಸುರಿಯಿತು.

"ಇಲ್ಲಿನ ಪ್ರಾಣಿಗಳೆಲ್ಲ ದುಷ್ಟರು. ಅವರನ್ನು ಕಂಡರೆ ನನಗಾಗುವುದಿಲ್ಲ. ಅವರೆಲ್ಲ ನನ್ನನ್ನು ಹಾಸ್ಯಮಾಡಿಕೊಂಡು ನಕ್ಕರು. ಡುಬ್ಬಣ್ಣ,



ಚಪ್ಪಟೆ ಪಾದ ಎಂದೇನೇನೋ ಕರೆದರು. ಅವರ ಹತ್ತಿರ ಆಡಲು ನಾನು ಹೋಗುವುದಿಲ್ಲ" ಎಂದು ತನಗಾದ ಅವಮಾನವನ್ನು ತಾಯಿಗೆ ವಿವರಿಸಿ ಹೇಳಿದ.

"ಸಾಕು! ಸಾಕು! ಇನ್ನಳಬೇಡ. ಅವರೆಲ್ಲ ಹುಚ್ಚರು, ಅದಕ್ಕೇ ನಿನ್ನನ್ನು ನೋಡಿ ನಗುತ್ತಾರೆ. ನಮಗೆ ಬೆನ್ನಮೇಲೆ ಡುಬ್ಬು ಏಕಿದೆ ಯೆಂದು ಅವರಿಗೇನು ಗೊತ್ತು? ಅದರ ಉಪಯೋಗ ಅವರಿಗೆ ತಿಳಿ ದಿದ್ದರೆ, ತಮಗೂ ಡುಬ್ಬು ಇರಬೇಕು ಎಂದು ಕೇಳಿಕೊಳ್ಳುತ್ತಿದ್ದರು. ನಮ್ಮ ಹಾಗೆ ಚಪ್ಪಟೆ ಪಾದವೂ ಇರಬೇಕು ಎಂದು ಅವರಿಗೆ ಅನಿಸು ತ್ತಿತ್ತು," ಎಂದು ಒಂಟೆಮ್ಮ ಸೋನನನ್ನು ಸಮಾಧಾನ ಮಾಡಿದಳು.



"ಆದರೆ, ಅಮ್ಮ, ನಿಜವಾಗೂ ನಮ್ಮ ಡುಬ್ಬುಗಳು ವಿಕಾರವಾಗಿ ಕಾಣುತ್ತವೆಯಲ್ಲವೆ? ಅವುಗಳಿಂದ ನಮಗೇನು ಪ್ರಯೋಜನ?" ಎಂದು ಸೋನ ಕೇಳಿದ.


ಒಂಟೆಮ್ಮ ಹೇಳಿದಳು: "ನಾವು ನೀರನ್ನು ಹೇಗೆ ಶೇಖರಿಸಿಟ್ಟು ಕೊಳ್ಳುತ್ತೇವೆಂದು ನಾನು ನಿನಗೆ ಹೇಳಿದ್ದು ನೆನಪಿಲ್ಲವೆ, ಮಗು? ಹಾಗೆಯೇ ಈ ಡುಬ್ಬಿನಲ್ಲಿ ನಾವು ಕೊಬ್ಬನ್ನು ಶೇಖರಿಸಿಟ್ಟುಕೊಳ್ಳು ತ್ತೇವೆ. ಆಹಾರ ಸಿಗದೇ ಇದ್ದಾಗ ಈ ಶೇಖರವಾದ ಕೊಬ್ಬನ್ನೇ ನಮ್ಮ ದೇಹ ಆಹಾರವಾಗಿ ಉಪಯೋಗಿಸಿಕೊಳ್ಳುತ್ತದೆ."

"ಅದು ಹೇಗೆ" ಎಂದು ಸೋನ ಕೇಳಿದ.

"ನಾವು ಆಹಾರ ತಿಂದಾಗ, ಅದರಲ್ಲಿ ಒಂದಿಷ್ಟು ಭಾಗ ನಮ್ಮ ಹೊಟ್ಟೆಯಲ್ಲಿ ಕೊಬ್ಬಾಗಿ ಮಾರ್ಪಾಟಾಗುತ್ತದೆ. ಆ ಕೊಬ್ಬು ಡುಬ್ಬಿನಲ್ಲಿ ಶೇಖರವಾಗುತ್ತದೆ. ಮರಳುಗಾಡಿನಲ್ಲಿ ದಿನಗಟ್ಟಲೆ ಆಹಾರ ಸಿಕ್ಕದೆ ಹಸಿವಿನಿಂದ ಬಳಲಿದಾಗ ಈ ಕೊಬ್ಬನ್ನು ದೇಹ ಉಪ ಯೋಗಿಸಿಕೊಂಡು ಶಕ್ತಿ ಪಡೆಯುತ್ತದೆ. ಹೀಗೆ ಶಕ್ತಿ ಬರುವುದರಿಂದ



ನಮಗೆ ಇನ್ನೂ ಮುಂದೆ ನಡೆಯಲು ಸಾಧ್ಯವಾಗುತ್ತದೆ. ಆಗ ಇಂಥ ಒಂದು ಫಲವತ್ತಾದ ಜಾಗದ ವರೆಗೂ ನಡೆದು ಬಂದು ಮತ್ತೆ ಆಹಾರ, ನೀರು ಪಡೆಯಲು ಸಾಧ್ಯವಾಗುತ್ತದೆ," ಎಂದು ಒಂಟೆಮ್ಮ ವಿವರಿಸಿ ಹೇಳಿದಳು





“ಈ ಉದ್ದವಾದ ಕಾಲುಗಳು, ಈ ಅವಲಕ್ಷಣದ ಚಪ್ಪಟೆ ಪಾದಗಳು, ಇವುಗಳಿಂದೇನು ಪ್ರಯೋಜನ? ಎಂದು ಸೋನ ಕೇಳಿದ.

“ಹಾಗೆಲ್ಲ ಅನ್ನಬೇಡ ಮಗು, ಅವೆಲ್ಲ ನಮಗೆ ತುಂಬ ಉಪಕಾರಿಯಾದ ಅವಯವಗಳು,” ಎಂದು ಒಂಟೆಮ್ಮ ತಿಳಿಸಿದಳು. “ಕಾಲುಗಳು ಉದ್ದವಾಗಿರುವುದರಿಂದ ನಾವು ಬೇಗ ಬೇಗ ನಡೆಯಬಹುದು. ನಮ್ಮ ಪಾದಗಳು ಚಪ್ಪಟೆಯಾಗಿರದಿದ್ದರೆ, ಮರಳಿನಲ್ಲಿ ನಡೆಯುವಾಗ ಕಾಲುಗಳು ಹೂತು ಹೋಗಿ ಮುಂದೆ ಹೆಜ್ಜೆ

ಯಿಡುವುದೇ ಅಸಾಧ್ಯವಾಗುತ್ತಿತ್ತು ಮಿಕ್ಕಾದ ಪ್ರಾಣಿಗಳಿಗೆ ಇದು ತಿಳಿದರೆ ಅವಕ್ಕೆ ನಿಜವಾಗೂ ನಮ್ಮನ್ನು ಕಂಡರೆ ಹೊಟ್ಟೆಕಿಚ್ಚಾಗುತ್ತದೆ.”



"ಆದರೆ ಈ ನಮ್ಮ ಉದ್ದವಾಗಿರುವ ಕತ್ತುಗಳು, ಅವುಗಳಿಂದೇನು ಪ್ರಯೋಜನ?"

"ಕಾಲುಗಳು ತೀರ ಉದ್ದವಾಗಿರುವುದರಿಂದ, ಕತ್ತೂ ತುಂಬ ಉದ್ದವಿರಬೇಕಲ್ಲವೆ?" ಎಂದು ಒಂಟೆಮ್ಮ ಹೇಳಿತು. "ಇಲ್ಲದಿದ್ದರೆ ನೆಲದ ಮೇಲಿರುವ ನೀರನ್ನು ಕುಡಿಯಲು ಹೇಗೆ ಸಾಧ್ಯ? ಅಲ್ಲದೆ ಅದರಿಂದ ಮರಗಳ ತೀರ ಮೇಲಿರುವ ಎಲೆಗಳನ್ನೂ ಕಿತ್ತು ತಿನ್ನಲು ನಮಗೆ ಸಹಾಯವಾಗುತ್ತದೆ, ಅಲ್ಲವೆ? ನೀಳವಾದ ಕತ್ತನ್ನು ಎತ್ತಿ ನೋಡುವಾಗ, ತುಂಬ ದೂರದಲ್ಲಿರುವ ಮರಗಿಡಗಳು ನಮ್ಮ ಕಣ್ಣಿಗೆ ಕಾಣಬರುತ್ತವೆ. ಹೀಗೆ, ನಮ್ಮ ಡುಬ್ಬು, ಉದ್ದವಾದ ಕಾಲು, ಚಪ್ಪಟೆಯಾಗಿರುವ ಪಾದ, ನೀಳವಾದ ಕತ್ತು ಎಲ್ಲ ನಮ್ಮ ಪ್ರಯೋಜನಕ್ಕಾಗಿಯೇ ಇವೆ ಎಂಬುದನ್ನು ತಿಳಿದುಕೋ. ಅವೆಲ್ಲ ನೀನು ಹೆಮ್ಮೆಪಟ್ಟುಕೊಳ್ಳಬೇಕಾದ ವಿಷಯಗಳು.

ಸೋನನಿಗೆ ಈಗ ಸಂತೋಷವಾಯಿತು. ತಾಯಿ ತನಗೋಸ್ಕರ ಕಿತ್ತು ಕೆಳಗೆ ಹಾಕಿದ್ದ ಚಿಗುರು ಎಲೆಗಳನ್ನೆಲ್ಲ ತಿಂದು ಮುಗಿಸಿ ಸುಖವಾಗಿ ನಿದ್ದೆ ಹೋದ.





ಮಾರನೆ ದಿನ ಮತ್ತೆ ಸಂಚಾರ ಹೊರಟ. ಮೊಲ, ನರಿ, ಹಂದಿ, ಮೇಕೆ, ಜಿಂಕೆ ಆಟವಾಡುತ್ತಿದ್ದರು. ಸೋನ ಅವರ ಕಡೆ ತಿರುಗಿ ಸಹ ನೋಡಲಿಲ್ಲ. ನೇರವಾಗಿ ದೃಷ್ಟಿಯಿಟ್ಟು ಗಂಭೀರವಾಗಿ ತನ್ನ ದಾರಿ ಹಿಡಿದು ಹೋದ.

"ಅವನನ್ನು ಹಿಂಬಾಲಿಸೋಣ," ಎಂದು ನರಿ ಹೇಳಿತು.

ಅವರೆಲ್ಲ ಸೋನನನ್ನು ಹಾಸ್ಯಮಾಡಿಕೊಂಡು ಹಿಂದೆಯೇ ಹೋದರು. ಸೋನ ಇದು ಯಾವುದಕ್ಕೂ ಗಮನ ಕೊಡದೆ ತನ್ನ ಪಾಡಿಗೆ ತಾನು ಹೋಗುತ್ತಿದ್ದ. ಕೊಳದ ದಡದಲ್ಲಿ ಒಂದು ಅತ್ತಿ ಹಣ್ಣಿನ ಮರ ಇತ್ತು. ಅದರ ರೆಂಬೆಗಳಿಗೆ ಅಂಟಿಕೊಂಡು ಬೆಳೆದಿದ್ದ ಕೆಂಪನೆಯ ಹಣ್ಣುಗಳು, ಬಾಯಲ್ಲಿ ನೀರೂರಿಸುತ್ತಿದ್ದುವು. ಸೋನ ಕತ್ತು ಚಾಚಿ ಹತ್ತಾರು ಹಣ್ಣುಗಳನ್ನು ಒಮ್ಮೆಗೇ ಗಬಳಿಸಿದ. ನೋಡುವುದಕ್ಕೆ ಸುಂದರವಾಗಿದ್ದಂತೆ ತಿನ್ನುವುದಕ್ಕೂ ಅವು ರುಚಿಯಾಗಿದ್ದುವು. ಸೋನ ಹೊಟ್ಟೆ ಬಿರಿಯುವಷ್ಟು ತಿಂದ.

ಅವನನ್ನು ಹಿಂಬಾಲಿಸಿದ್ದ ಪ್ರಾಣಿಗಳು ಇದನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದುವು. ಅವಕ್ಕೂ ಹಣ್ಣು ಕಂಡು ಆಸೆಯಾಯಿತು. ಬಾಯಲ್ಲಿ ನೀರೂರಿತು. ಆದರೆ ರೆಂಬೆಗಳು ಬಹಳ ಎತ್ತರದಲ್ಲಿದ್ದುವು. ಹಣ್ಣುಗಳು ಅವಕ್ಕೆ ನಿಲುಕುವಂತಿರಲಿಲ್ಲ.

"ಅವನನ್ನು ಒಳ್ಳೇ ಮಾತಿನಲ್ಲಿ ಕೇಳಿದರೆ ನಮಗೂ ಒಂದಿಷ್ಟು ಹಣ್ಣು ಕಿತ್ತು ಕೊಟ್ಟಾನು," ಎಂದು ಜಿಂಕೆ ಆಸೆಯಿಂದ ಹೇಳಿತು.

"ಅವನನ್ನು ಬೇಡುವುದೆ? ಖಂಡಿತ ಬೇಡ. ನಾನಿಲ್ಲವೆ? ನಾನೇ ಕಿತ್ತು ಕೊಡುತ್ತೇನೆ. ಅಂಥ ಬಂಡೆಗಳ ಮೇಲಾದರೂ ಏರುವ ನನಗೆ ಈ ಮರ ಹತ್ತಲು ಸಾಧ್ಯವಿಲ್ಲವೆ?" ಎಂದು ಮೇಕೆ ಜಂಭ ಕೊಚ್ಚಿಕೊಂಡಿತು.









ಹಿಂಗಾಲುಗಳ ಮೇಲೆ ನಿಂತು ಮೇಕೆ ಮುಂಗಾಲುಗಳನ್ನು ಮರದ ಮೇಲೆ ಏರಿಸಿತು. ಕತ್ತನ್ನು ಚಾಚಿ ಮೇಲೆ ಹತ್ತಲು ಪ್ರಯತ್ನ ಮಾಡಿತು. ಸಾಧ್ಯವಾಗಲಿಲ್ಲ. ಹಣ್ಣಿದ್ದ ರೆಂಬೆ ಅದಕ್ಕೆ ಎಟುಕಲಿಲ್ಲ. ಕತ್ತು ಚಾಚಿದ್ದೂ ಚಾಚಿದ್ದೇ! ಮುಂಗಾಲುಗಳನ್ನು ಪಟಪಟ ಬಡಿದದ್ದೂ ಬಡಿದದ್ದೇ! ಒಂದು ಸಾರಿ ಜೋರಾಗಿ ನೆಗೆದಾಗ ಹಿಂಗಾಲು ಜಾರಿ ಮೇಕೆ ಕೊಳದೊಳಗೆ ಧೊಪ್ ಎಂದು ಬಿದ್ದೇಬಿಟ್ಟಿತು.

"ಕಾಪಾಡಿ, ಕಾಪಾಡಿ!" ಎಂದು ಮೇಕೆ ಅರಚಿಕೊಂಡಿತು.



ಮೇಕೆಯ ಗೆಳೆಯರೆಲ್ಲ ಕೊಳದ ದಡದಲ್ಲಿ ಬೆಪ್ಪಾಗಿ ನಿಂತಿದ್ದರು. ಅವರ್ಯಾರಿಗೂ ಮೇಕೆಯನ್ನು ಎತ್ತಿ ದಡಕ್ಕೆ ತಂದು ಹಾಕುವಷ್ಟು ಶಕ್ತಿಯಿರಲಿಲ್ಲ. ಅವರೆಲ್ಲ ತೀರ ಸಣ್ಣ ಪ್ರಾಣಿಗಳು ತಾನೆ? ಆಗ ಅವರು ಸೋನನ ಕಡೆ ತಿರುಗಿ,

"ಮೇಕೆಯನ್ನು ಕಾಪಾಡಪ್ಪ! ನೀನು ಎಷ್ಟಾದರೂ ಭಾರಿ ಇದ್ದೀ," ಎಂದು ಅವನನ್ನು ಗೋಗರೆದರು.

ಸೋನ ತತ್‌ಕ್ಷಣ ಕೊಳದಲ್ಲಿಳಿದು ಸಲೀಸಾಗಿ ಮೇಕೆಯ ಹತ್ತಿರ ಹೋದ.

"ನನ್ನ ಬೆನ್ನ ಮೇಲೆ ಏರಿಕೋ," ಎಂದು ಹೇಳಿ ಬೆನ್ನು ತಗ್ಗಿಸಿದ. ಮೇಕೆ ಸೋನನ ಬೆನ್ನ ಮೇಲೆ ಹತ್ತಿ ಕುಳಿತುಕೊಂಡಿತು. ಸೋನ ಅವನನ್ನು ಮೆಲ್ಲಗೆ ಕೊಳದ ದಡಕ್ಕೆ ತಂದು ಇಳಿಸಿದ.



“ಸೋನಣ್ಣ, ನನ್ನ ಜೀವವನ್ನು ಇಂದು ನೀನು ಕಾಪಾಡಿದೆ. ನೀನೆಷ್ಟು ಒಳ್ಳೆಯವನು! ಹಿಂದೆ ನಾನು ನಿನ್ನನ್ನು ಹಾಸ್ಯಮಾಡಿದ್ದನ್ನು ಮರೆತುಬಿಡು. ನನ್ನಿಂದ ತಪ್ಪಾಯಿತು. ಇನ್ನು ಮೇಲೆ ನಾವೆಲ್ಲ ಸ್ನೇಹಿತರಾಗಿರೋಣ,” ಎಂದು ಮೇಕೆ ಕೃತಜ್ಞತೆಯಿಂದ ನುಡಿಯಿತು.

ಸೋನನಿಗೆ ತುಂಬ ಸಂತೋಷವಾಯಿತು. “ಬನ್ನಿ ಹಾಗಾದರೆ, ಎಲ್ಲರೂ ಆಟವಾಡೋಣ!” ಎಂದು ಅವರ ಜೊತೆ ಹೊರಟ.

ಅಂದಿನಿಂದ ಅವರೆಲ್ಲರೂ ಒಬ್ಬರಿಗೊಬ್ಬರು ಸ್ನೇಹವಾಗಿ ಸಂತೋಷದಿಂದ ಕಾಲ ಕಳೆಯುತ್ತಿದ್ದರು.



Printed at Infinity Advertising Services Pvt. Ltd. (Faridabad)



nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 55.00
ISBN 935491167-6
9 789354 911675
21222049
Sona's Adventures *(Kannada)*